ಎಲ್ಲರಿಗೂ ಸರಿ ಅನ್ನಿಸ್ತು. ಅಂಕಪ್ಪಗ ತಾನು ಎಂತ ಕೆಟ್ಟ ಕೆಲಸ ಮಾಡಿದೆ ಅನ್ನಿಸ್ತು. 'ಎತ್ಗತಾ ಇನ್ನೊಂದಿಷ್ಟು ಬೆಡ್ಡು ಎತ್ಗಂಬಂದಿದ್ರಾ ಈ ಐಕ್ಳಿಗೆಲ್ಲ ಆಯ್ತಿತ್ತು'. ಚೀಲದಲ್ಲಿ ಇದ್ದ ಬೆಡ್ಡು ಯಾರೋ ಒಬ್ಬ ತಾಯಿಗ ನೀಡಿದನು. ತಾನು ಬೇಗನೆ ಊರು ಸೇರ್ಕಬೇಕು ಅಂತ ಮನ್ಸಿಗೆ ಬಂದದ್ದೇ ದೊಡ್ಡ ಹೆಜ್ಜೆಯಲ್ಲಿ ನಡೆಯತೊಡಗಿದನು. ಇವರೇನೋ ಅವುಸ್ಕಂಡು ನಡಿತವ್ರ ಆದ್ರ ಆ ಮಾನಗರದ ರಾತ್ರಿ ಇವರೆಲ್ಲ ನಡಿತಾ ಇರೋದ್ನ ಚೂರೂ ಮುಚ್ಚಿಟ್ಕಳಲಿಲ್ಲ. ಯೂನಿವರ್ಸಿಟಿ ಟರ್ನು ದಾಟಿ ದಿಬ್ಬ ಹತ್ತೇಕು ಜೀಪುಗಳು ನುಗ್ಗಿ ಬಂದವು. ಲಾಟಿಗಳು ಸಿಕ್ಕವರಿಗೆಲ್ಲ ಬಡಿದವು. ಅಂಕಪ್ಪ ಮ್ಯಾಕ್ಕ ಹತ್ತಿ ಟ್ರೇನು ಕಂಬಿಯ ಕಡೆಗೋಡಿ ಲಾಟಿಗಳಿಂದ ತಪ್ಪಿಸ್ಗಂಡನು. ಉಳದವ್ರು ಹೆಂಗಸ್ರು ಮಕ್ಕಳ ಜೊತ್ಗ ಕರ್ಕಂಡಿದ್ದವ್ರು. ಇವ್ನು ಒಂಟಿ. ಇವ್ನ ಜೊತ್ಗ ಯಾರೂ ಬರ್ನಿಲ್ಲ. ತಾನು ಒಂಟಿ ಅನಿಸಿದಾಗ ಅಪ್ಪ ಅವ್ವನ ನೆನಪಾಗಿ ಸುಮ್ನ ಕೂತನು. ಈ ಕಂಬಿ ಮೇಲೆ ನಡ್ಕಂಡು ಹೋದ್ರ ಮಯ್ಸೂರ್ಗ ವೊಂಟೋಯ್ತೀನಿ. ಅನ್ನಿದ್ದೇ ಎದ್ದು ನಡ್ದನು. ಕೆಂಗೇರಿ ಸ್ಟೇಷನ್ತವು ಬಿದ್ದಿದ್ದ ಒಂದು ವಾಟರ್ ಕ್ಯಾನ್ ಎತ್ಕಂಡು ನೀರು ತುಂಬಿಸಿ ಕುಡ್ದೂ ಬ್ಯಾಗಲ್ಲಿ ಮಡಿಕಂಡು ಸ್ಟೇಷನ್ನ ಲೈಟುಗಳ ದಾಟಿ ಮುಂದ್ಕ ನಡ್ದನು. ಹೆಜ್ಜಾಲ ಸ್ಟೇಷನ್ತವು ಯಾವ್ದೋ ಟೆಂಟು ಕಂಡು ಅತ್ತಗ ನಡ್ದನು. ರಾತ್ರಿ ಎಷ್ಟಾಗಿತ್ತೊ... 'ಅಕ್ಕಾ... ಅಣ್ಣಾ... ಹೊಟ್ಟ ಹಸಿತದ ವಸಿ ಅನ್ನ ಕೊಡಿ' ಟೆಂಟಿಂದ ಒಂದು ಕಡ್ಡಿಯೂ ಅಲುಗಾಡಲಿಲ್ಲ. ಅಂಕಪ್ಪಗೂ ಮುಂದ್ಕ ನಡಿಯಾಕ ಆಗ್ನಿಲ್ಲ.

ಗ್ಯಾನ ಬಂದಾಗ ಸೂರ್ಯ ಮುಳುಗಾಕ ವೊಯ್ತಿದ್ದ. ಬ್ಯಾಗಲ್ಲಿದ್ದ ಕ್ಯಾನು ತೆಗ್ದು ನೀರು ಕುಡ್ದು ಕೂತ್ರ ಇಡೀ ಲೋಕವೇ ತನ್ನ ಸುತ್ತ ತಿರುಗ್ತಾ ಅದ ಅನ್ನಂಗ ಅನ್ನಿಸ್ತು. ಆಗ ಆ ಹೊಟ್ಟ ಹಸಿವಿಗ ಹೊಟ್ಟಕಿಚ್ಚಾಗಿ 'ಲೋಕ ಏನಿದ್ರೂವಿ ತನ್ನ ಸುತ್ತ ತಿರುಗ್ಬೇಕು ಅದ್ಬುಟ್ಟು ಈ ಗಂಡಿನ ಸುತ್ತ ತಿರ್ಗೋದು ಅಂದ್ರ ಅದು ತನಗಾದ ಅವಮಾನ' ಅಂದ್ಕಂಡು ಅಂಕಪ್ಪನ ಹೊಟ್ಟ ಹಸಿವನ್ನ ಬಡಿದೆಬ್ಬಿಸಿತು. ಏನಾದ್ರೂ ತಿನ್ನಾಕ ಸಿಗ್ದಿದ್ರ ತಾನು ಸತ್ತೊಯ್ತೀನಿ ಅನ್ನಿಸ್ತು. ಅಪ್ಪ ಅವ್ವನ್ನ ನೋಡೋಗಂಟ ತಾನು ಸತ್ತೋಗಬಾರ್ದು ಅಂದ್ಕಂಡು ಟೆಂಟಿನ ಒಳಕ್ಕ ನೋಡಿದನು. ಪಾತ್ರಗಳು ಅನಾಥವಾಗಿ ಬಿದ್ದಿದ್ವು. ಒಲ ಬಿಂಕಿ ಆರ್ನಿಲ್ಲ ಅಂದ್ರ ಇವ್ರೂವಿ ತನ್ನಂಗ ರಾತ್ರನಗ ಊರಿಗೊಂಟಿರಬೇಕು. ಇಲ್ಲಿದ್ರ ಸತ್ತೋಯ್ತೀನಿ ಅಂತ ಅಪ್ಪ ಅವ್ವನ್ನ ನೆನೆಸಿಕೊಂಡು ಅಲ್ಲಿಂದ ಕಡ್ದನು. ಬಿಡದಿ ತಲುಪೋ ಹೊತ್ತಿಗ ಮೂರ್ ರಾತ್ರಗಳು ಬರೀ ನೀರಲ್ಲೇ ಕಳ್ದಿತ್ತು. ಇನ್ನು ತನ್ನಿಂದ ಆಗಾಕಿಲ್ಲ. ಕಂಬಿ ಮೇಲೆ ನಡದ್ರ ಜನ್ಗಳು ಕಾಣ್ಸಲ್ಲ. ತಿನ್ನಾಕ ಏನೂ ಸಿಗಲ್ಲಂತ ಬಿಡದೀಲಿ ಟ್ರೇನು ಕಂಬಿ ಬುಟ್ಟು ಮೇನ್ ರೋಡಿಗ ಬಂದನು.

ಆ ಮೇನ್ ರೋಡು ರಕ್ತಬೀಜಾಸುರನ ಕೊಲ್ಲೋ ಟೇಮಿಗ ಕಾಳಮ್ಮಾಯಿ ನಾಲ್ಗ ಚಾಚ್ಗಂಡಂಗ ಪೋಟದಲ್ಲಿರುತ್ತಲ್ಲ ಹಂಗ ನಾಲ್ಗ ಚಾಚ್ಗಂಡು ಮನ್ಗದ. 'ನೋಡು ತಾಯಿ ನನ್ಗೂ ಒಬ್ಬಳು ತಾಯಿ ಅವ್ಳ. ಅವ್ಳನ್ನ ನೋಡ್ಬೇಕು ಅಂತ ವೊಯ್ತವ್ನಿ. ನಿಂಗ ನುಂಗಾಕ ಸಗ್ತಿ ಇದ್ರ ಲೋಕದಾಗಿನ ಹಸಿವು ಐತಲ್ಲ ಅದ್ನ ನುಂಗು' ಅಂತ ಕಾಳಮ್ಮಾಯಿಗ ಅಂತೀನಿ ಅಂದ್ಕಂಡು ಅಂಕಪ್ಪ ಮೇನ್ ರೋಡಲ್ಲಿ ನಡ್ದು ಒಂತುತ್ತು ಅನ್ನವ ಹುಟ್ಟುಸ್ಕಂಡ. ಮೂರ್ಜಿನ ಆದ್ಮೇಲ ಹೊಟ್ಟ ಒಳಕ್ಕ ಅನ್ನ ಬಿದ್ದಿದ್ಕ ಏನೋ ಇಡೀ ದೇಹವು ಭಾರವಾಗಿ ಕಣ್ಣೊಳಗ ನಿದ್ದ ತೂಗಿ ಮರದ ಕೆಳಗ ನಿದ್ದೆಯಾದನು.

***

ಏಳ್ಜಿನ ಆದ್ರೂವಿ ಲಶ್ಮಿಗ ಗಂಡನನ್ನ ಡಾಗಟ್ರು ಹತ್ರಕ್ಕ ಕರ್ಕಂಡು ಹೋಗೋಕೆ ಆಗಲಿಲ್ಲ. ನಾರಾಯ್ಣಿ ಕಾಲಿನ ಗಾಯಗಳು ಕೀತ್ಕಂಡು ಅಡ್ಡಾದಿಡ್ಡಿ ಊದ್ಕಂಡು ಅವ್ನಿಗ ಸಾವಂತ ನೋವನ್ನ ಉಣಿಸ್ತಿತ್ತು. ಪಕ್ಕದ ಹಟ್ಟಿಯವ್ರ ಹತ್ರ ಅಸಿಟ್ಟು ಈಸ್ಗಂಡು ಜಿನ ದೂಡಿದ್ದಾಯ್ತು. ಹೆಗ್ಗಳ್ಳಿಗ ಹೋಗಿದ್ದು ಬರಾವು ಅಂದ್ರ ಲಾಟಿಗಳ ಭಯ. ಏನಾರ ಆಗ್ಲಿ ಬೆಳಕರೀತ್ಲೇ ಹೋಗಿ ಗೊಂಬ ಡಾಗಟ್ರುನ್ನ ನೋಡ್ಕಂಡು ಬರಾದು ಅಂದು ದುಡ ಮಾಡಿಕೊಂಡು ಗಂಡನ ಕೀತ್ಕಂಡ ಗಾಯಗಳ ಸೀಟಿದಳು. ನಾರಾಯ್ಣಿ ರೋದ್ನೆಯ ಆ ಗದ್ದ ತೋಟಗಳೆಲ್ಲಾವಿ ಹೀರ್ಕಂಡು ಮೂಡಲ ದಿಕ್ಕಿಗ ತಿರ್ಗಿದವು. ಅಷ್ಟಕ್ಕ ಬೆಳಕಾಯ್ತು. ಲಶ್ಮಿ ಈಚ್ಗ ಬಂದು ನೋಡ್ತಳ ರೋಡಲ್ಲಿ ವಾನಗಳು ಓಡಾಡ್ತಿದ್ವು. ಅಂಗಾರ ಬುಡ್ತರ ಅಂದ್ಕಂಡು ಗದ್ದ ತೆವ್ರ್ ಮೇಲೆ ಹೆಗ್ಗಳ್ಳಿಗ ಓಡಿದಳು.

***

ಬಿಸಿಲು ಅಂಕಪ್ಪನ್ನ ಎಬ್ಬಿಸಿತು. ರೋಡಲ್ಲಿ ವಾನಗಳು ಓಡಾಡ್ತಿದ್ದವು. ಹಂಗಾರ ಊರ್ಗ ಹೋಗೋದಕ್ಕೆ ಏನಾದ್ರು ಸಿಕ್ತದ ಅಂದ್ಕಂಡು ಹೋಗೋ ಬರೋ ವೆಯ್ಕಲ್ಗಿಗ ಕೈ ಹಿಡುದ್ರ ಅವ್ರು 'ನೀ ಯಾವೂರ್